

(6ನೇ ಪುಟದಿಂದ)

ಪಾನೀಯವನ್ನೋ ಸವಿಯುತ್ತಾ ಮೈ–ಮನಗಳ ಬೆಚ್ಚಗಾಗಿಸಿಕೊಳ್ಳುವವರೂ ಇದ್ದಾರೆ. ಸಂಗಾತಿಯ ಸಾಂಗತ್ಯದೊಂದಿಗೆ ಚಳಿಗೇ ಚಳಿ ಹುಟ್ಟಿಸುವ ರಸಿಕರೂ ಇದ್ದಾರೆ. ರಮ್ಯ ಭಾವನೆಗಳಿಗೆ ಚಳಿ ನೀಡಿದಷ್ಟು ಉತ್ತೇಜನ ಬೇರಾವ ಕಾಲವೂ ನೀಡಲಾರದು. ಈ ಹಿನ್ನೆಲೆಯಲ್ಲೇ ಸಿನಿಮಾ ನಿರ್ದೇಶಕ ಯೋಗರಾಜ ಭಟ್ಟರು – 'ಬೆಚ್ಚಗೆ ನೀ ಜೊತೆಗಿರಲು ಕೂತಲ್ಲಿಯೇ ಚಳಿಗಾಲ' ಎಂದು ಉದ್ಗರಿಸಿರುವುದು.

ಚಳಿ ಕೂಡ ಇತ್ತೀಚಿನ ವರ್ಷಗಳಲ್ಲಿ ಒಂದಾನೊಂದು ಕಾಲದ ಹಿತವಾದ ನೆನಪಿನ ರೂಪ ಹೊಂದುತ್ತಿದೆ. ರಾತ್ರಿಗಳಲ್ಲಿ ಸೆಕೆಯೋ ನಡುಕವೋ ಹೇಳಲಾಗದ ಸ್ಥಿತಿ. ಬೆಳಗಿನ ಅಂಗಳಗಳನ್ನೂ ಬಯಲುಗಳನ್ನೂ ಇಬ್ಬನಿಯೇನೋ ತೋಯಿಸುತ್ತದೆ. ಆದರೆ, ಗಾಢವಾದ ಇಬ್ಬನಿ ಸುರಿಯುವುದನ್ನು ನೋಡಲು ನಗರಗಳಿಂದ ಸ್ವಲ್ಪ ದೂರದ ಬಯಲುಗಳಿಗೇ ಬರಬೇಕು. ಬೆಟ್ಟ ಬಯಲುಗಳನ್ನೂ ಊರುಕೇರಿಗಳನ್ನೂ ಗಿರಮರಗಳನ್ನೂ ಒಟ್ಟಾಗಿ ಬೆಸೆಯುವ, 'ಬಾನಿಗ್ ಬೆಳ್ಳಿ ಬಳಿದಂಗೆ' ಭಾಸವಾಗುವ, ಬೆಳಗಿನ ಇಬ್ಬನಿಯ ಮಾಯಕತೆಯನ್ನು ಪದಗಳಲ್ಲಿ ಹಿಡಿದಿಡಲಾಗದು.

ಚಳಿಯ ತೆಕ್ಕೆಗೆ ಸಿಲುಕಿದ ಸಂದರ್ಭದಲ್ಲಿ ನಮ್ಮೊಳಗೊಂದು ಅಗ್ಗಿಷ್ಟಿಕೆ ಜಾಗೃತಗೊಳ್ಳುತ್ತದೆ. ಅದನ್ನು ಯಾವ ಹೆಸರಿನಿಂದ ಕರೆಯುವುದು? ಅದು ಬದುಕಿನ ಕುರಿತ ಮೋಹವನ್ನು ಹೆಚ್ಚಿಸುವ ಧಾತುವೇ? ಕಾಮನೆಗಳ ಉದ್ದೀಪಕವೇ? ಅಥವಾ, ಹೆಪ್ಪುಗಟ್ಟಿದಂಥ ಭಾವವನ್ನು ಮೀರಿ ಬೆಳಕಿನತ್ತ ನಡೆಸುವ ಹಂಬಲವೇ? ಇವೆಲ್ಲವನ್ನೂ ಮೀರಿ, ನಮ್ಮೊಳಗೆ ನಮಗರಿವಿಲ್ಲದಂತೆ ಹುದುಗಿರುವ ಯಾವುದೋ ಕಿಡಿಯನ್ನು ಪುಟಗೊಳಿಸುವ ಅಮೃತಕ್ಷಣವೇ? ಈ ಜಿಜ್ಞಾಸೆಯಲ್ಲೇ ಇರಬೇಕು, ಫ್ರೆಂಚ್ ಬರಹಗಾರ ಆಲ್ಬರ್ಟ್ ಕಮೂ ಹೇಳುತ್ತಾನೆ: 'ಚಳಿಗಾಲದ ತಾರಕ ಸ್ಥಿತಿಯಲ್ಲಿ ನನಗೆ ಕೊನೆಗೂ ಅರ್ಥವಾದ ಸಂಗತಿಯೆಂದರೆ, ನನ್ನೊಳಗೊಂದು ಅಜೇಯವಾದ ಬೇಸಗೆ ಅಡಗಿರುವುದು.' ಎಂಥ ಸತ್ಯವಲ್ಲವೇ – ಎದೆಯೊಳಗೆ ಬೇಸಗೆ ಇಲ್ಲದೆ ಹೋದರೆ ಚಳಿಯನ್ನು



ಎದುರಿಸುವುದಾದರೂ ಹೇಗೆ, ಚಳಿ ರುಚಿಸುವುದಾದರೂ ಹೇಗೆ?

ಈಗ, ಮತ್ತೆ ಚಳಿಯ ದಿನಗಳು ನಿಧಾನವಾಗಿ ತಮ್ಮ ಪಕಳೆಗಳನ್ನು ಬಿಚ್ಚುತ್ತಿವೆ. ನಿಜ, ಮೊದಲಿನಂತೆ ಮೈ ನಡುಗಿಸುವ, ಮೂಳೆ ಮೂಳೆಗಳನ್ನು ಮುದ್ದಿಸುವಂಥ ಚಳಿಯ ಕಚಗುಳಿ ಈಗಿಲ್ಲ. ಪ್ರಕೃತಿಯ ಕ್ಯಾಲೆಂಡರ್‌ನಲ್ಲಿ ಮನುಷ್ಯನ ಹಸ್ತಕ್ಷೇಪದ ಚಹರೆಗಳು ಗಾಢವಾಗುತ್ತಾ ಹೋದಂತೆ ಮಳೆ, ಚಳಿ, ಬಿಸಿಲುಗಳೂ ತಮ್ಮ ಸಹಜ ಲಯವನ್ನು ಕಳೆದುಕೊಳ್ಳುತ್ತವೆ. ಕಳೆದುಕೊಂಡದ್ದಕ್ಕೆ ಹಳಹಳಿಸುವುದು ಬಿಟ್ಟು, ಇರುವುದರಲ್ಲಿ ಬದುಕಿನ ಚೆಲುವು ಹುಡುಕಬೇಕಾದುದು ಈ ಕ್ಷಣದ ಅನಿವಾರ್ಯ.

ಸ್ವಲ್ಪ ಗಮನವಿಟ್ಟು ನೋಡಿದರೆ – ಅರಳಿದ ಹೂ ಮೇಲಿನ ಹನಿ, ಇರುಳಲ್ಲಿ ಚಿಟಪಟ ಸದ್ದುಮಾಡುತ್ತ ಉರಿವ ಅಗ್ಗಿಷ್ಟಿಕೆ, ಬಿಸುಪಿನ ಉಡುಪುಗಳಲ್ಲಿ ಅವಿತುಕೊಳ್ಳುವ ಶರೀರಗಳು – ಎಷ್ಟೊಂದು ರೂಪಗಳಲ್ಲಿ ಚಳಿ ನಮ್ಮ ನಡುವಿದೆ. ಇದು ಚಳಿಯನ್ನು ನಮ್ಮದಾಗಿಸಿಕೊಳ್ಳುವ, ಆನಂದಿಸುವ ಸಮಯ.